ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಾನವಿ.

ಸಿ.ಸಿ. ಸಂಖ್ಯೆಃ 1035/2021 CW-3 PW- 1

| | |
|---|---|
| ಹೆಸರು | ಮಲ್ಲಯ್ಯ |
| ತಂದೆಯ ಹೆಸರು | ಕರಿಯಪ್ಪ |
| ವಯಸ್ಸು | 35 |
| ಉದ್ಯೋಗ | ಒಕ್ಕಲುತನ |
| ವಾಸ ಸ್ಥಳ | ಬೈಲುಮಾರ್ಚಡ್ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 19-06-2024

ಮುಖ್ಯ ವಿಚಾರಣೆಃ ಸ ಸ ಅ ಅವರಿಂದ

ನನಗೆ ಚಾ.ಸಾ. 1 ಮತ್ತು 2 ಗೊತ್ತು. 2-3 ವರ್ಷಗಳ ಹಿಂದೆ ಪೋಲೀಸರು ನಾನು ನಮ್ಮ ಗ್ರಾಮದಲ್ಲಿದ್ದಾಗ ಒಂದು ದಾಖಲೆಯ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ಕಡತದಲ್ಲಿರುವ ಪಂಚನಾಮೆಯಲ್ಲಿ ಸಾಕ್ಷಿ ತನ್ನ ಸಹಿ ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿ.ಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 2(ಎ) ಎಂದು ಗುರುತಿಸಲಾಯಿತು. ಪೋಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ವಾಹನ ಜಪ್ತಿಪಡಿಸಿಕೊಂಡಿಲ್ಲ. ನಿ.ಪಿ. 2 ರಲ್ಲಿರುವ ವಿಷಯ ಗೊತ್ತಿಲ್ಲ.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿಲಾಯಿತು.)

ಪಾಟೀ ಸವಾಲು ಃ ಸಸಅ ಅವರಿಂದ

ಕಪಗಲ್-ಮಂತ್ರಾಲಯ ರಸ್ತೆಯಲ್ಲಿ ಆದ ಅಪಘಾತದ ವಿಷಯದಲ್ಲಿ ದಿ: 13-01-2021 ರಂದು ಪೋಲೀಸರು ನನ್ನನ್ನು ಹಾಗೂ ಚಾ.ಸಾ. 2 ರನ್ನು ಪಂಚ ಸಾಕ್ಷಿದಾರರಾಗಿ ಕರೆಸಿದ್ದರು ಎಂದರೆ ಸರಿಯಲ್ಲ. ಚಾ.ಸಾ. 1 ತೋರಿಸಿದ ಸ್ಥಳದಲ್ಲಿ ಮ. 3.00 ರಿಂದ 4.00 ರವರೆಗೆ ಪಂಚನಾಮೆ ಮಾಡಿ ಒಂದು ಕ್ರೂಷರ್ ವಾಹನ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಪಂಚನಾಮೆ ಮಾಡಿದ್ದರೂ ಆರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

ಓ. ಹೇ. ಕೇ. ಸರಿ ಇದೆ,

ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,
ಮಾನವಿ.